ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
E-mail:Commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಪಿಯು/ ಶೈ.ಶಾ-4/ಎನ್.ಎಸ್.ಕ್ಯೂ.ಎಫ್/ಪ್ರಾ.ಪ.ಅನು /2017-18

ದಿನಾಂಕ: 26-05-2017

## ಜ್ಞಾಪನ

ವಿಷಯ:- 2016-2017 ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆ ಅಡಿಯಲ್ಲಿ ವೃತ್ತಿ ಶಿಕ್ಷಣ ವಿಷಯಗಳನ್ನು ಆಯ್ಕೆ ಮಾಡಿಕೊಂಡ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟಣೆ ಹಾಗೂ 2017-2018 ಸಾಲಿಗೆ ಕಾರ್ಯಕ್ರಮಗಳನ್ನು ಮುಂದುವರೆಸುವ ಕುರಿತು.

ಉಲ್ಲೇಖ:- 1. ಸ.ಆ.ಸಂ.ಇಡಿ.57.ಎಂಸಿಡಿ 16 ಬಎಂ ದಿನಾಂಕ 16.06.2016
2. ಈ ಕಛೇರಿ ಸಮ ಸಂಖ್ಯೆ ದಿನಾಂಕ:- 03.08.2016
3 ಈ ಕಛೇರಿ ಸಮ ಸಂಖ್ಯೆ ದಿನಾಂಕ :- 13.02.2017
4. ರಾಜ್ಯ ಯೋಜನಾ ನಿರ್ದೇಶಕರ ಪತ್ರ ಸಂಖ್ಯೆ ಆ 5 ಎನ್ ಎಸ್ ಕ್ಯೂ ಎಫ್ 22/2016-17 ದಿನಾಂಕ:16.05.2017

-----

2016-2017 ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯಡಿ ವೃತ್ತಿ ಶಿಕ್ಷಣ ಕಾರ್ಯಕ್ರಮವನ್ನು IT/ITes, Automotive, Health Care, Beauty and wellness ಹಾಗೂ Retail Sector ಗಳಲ್ಲಿ (ವಿಷಯಗಳಲ್ಲಿ) ಅನುಷ್ಠಾನ ಗೊಳಿಸಲಾಗಿದೆ ಉಲ್ಲೇಖ (01). ಮತ್ತು 02 ರ ಆದೇಶದಂತೆ, ಭಾಗ 01 ರಲ್ಲಿನ ಎರಡು ಭಾಷೆಗಳಲ್ಲಿ ಒಂದು ಭಾಷೆಯ ಬದಲಾಗಿ ಒಂದು ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲು ತಿಳಿಸಲಾಗಿತ್ತು.

ಅದರಂತೆ ಆಯ್ದ ಕಾಲೇಜುಗಳಲ್ಲಿ 2016-2017 ನೇ ಸಾಲಿನಿಂದ ಪ್ರಥಮ ಪಿಯುಸಿಯಲ್ಲಿ ಎನ್.ಎಸ್.ಕ್ಯೂ.ಎಫ್ ಅಡಿಯಲ್ಲಿ ವೃತ್ತಿ ಶಿಕ್ಷಣ ಹಂತ 3 (ಪ್ರಥಮ ಪಿಯುಸಿ) ರಲ್ಲಿ ಅನುಷ್ಠಾನಗೊಂಡಿದ್ದರಿಂದ ಉಲ್ಲೇಖ (03) ರಲ್ಲಿ ಸದರಿ ವಿಷಯಗಳಿಗೆ ವಿಷಯ ಸಂಕೇತ ನೀಡಿ ಆದೇಶಿಸಲಾಗಿದೆ.

ಉಲ್ಲೇಖ (04) ರ ಸುತ್ತೋಲೆಯಲ್ಲಿ ವೃತ್ತಿ ಶಿಕ್ಷಣ ಆಯ್ಕೆ ಮಾಡಿಕೊಂಡು ಅರ್ಹತೆ ಹೊಂದುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ (ಪರೀಕ್ಷೆ) ಹಾಗೂ ಎನ್.ಎಸ್.ಡಿ.ಸಿ ಜಂಟಿಯಾಗಿ ನೀಡಬೇಕಾಗಿರುವುದರಿಂದ ಅಂಕಗಳನ್ನು ಆಯಾ ಕಾಲೇಜಿನ ಪ್ರಾಚಾರ್ಯರು ಕ್ರೋಢೀಕರಿಸಲು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಲ್ಲಿಸಲು ತಿಳಿಸಲಾಗಿದೆ ಅದರಂತೆ ಈಗಾಗಲೇ ರಾಜ್ಯದ ಕೆಲವು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿಯಲ್ಲಿ ವೃತ್ತಿ ಶಿಕ್ಷಣ ವಿಷಯಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲಾಗಿದ್ದು ಎನ್.ಎಸ್.ಡಿ.ಸಿ/ ತರಬೇತುದಾರರು ನೀಡಿರುವ ಪ್ರಾಯೋಗಿಕ ಅಂಕಗಳನ್ನು ಸಂಬಂಧಪಟ್ಟ ಪ್ರಾಚಾರ್ಯರು ಕ್ರೋಢೀಕರಿಸಿ ಸದರಿ ವಿದ್ಯಾರ್ಥಿಗಳ ಪ್ರಥಮ ಪಿಯುಸಿ ಫಲಿತಾಂಶವನ್ನು ಪ್ರಕಟಿಸಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು ಉಲ್ಲೇಖ (05) ರ ಪತ್ರದಲ್ಲಿ 2017-18 ನೇ ಸಾಲಿಗೆ ವೃತ್ತಿ ಶಿಕ್ಷಣ ಹಂತ -03 (ಪ್ರಥಮ ಪಿ.ಯುಸಿ) ಮತ್ತು ಹಂತ 04 (ದ್ವಿತೀಯ ಪಿಯುಸಿ) ಗಳಿಗೆ ಅನುಷ್ಠಾನಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹಂತ -03 ರಲ್ಲಿ ಅರ್ಹತೆ ಹೊಂದಿದ

ವಿದ್ಯಾರ್ಥಿಗಳನ್ನು ಹಂತ-04 ರ ಪ್ರವೇಶಕ್ಕೆ ಅವಕಾಶ ನೀಡಲು ಹಾಗೂ 2017 ಮಾರ್ಚ್/ಜೂನ್ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವೃತ್ತಿ ಶಿಕ್ಷಣ ತೆಗೆದುಕೊಂಡು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಅದೇ ಕಾಲೇಜಿನಲ್ಲಿ ಹಂತ 03 ಕ್ಕೆ ಪ್ರವೇಶ ಅವಕಾಶ ನೀಡಲು ಅನುಷ್ಠಾನಿತ ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದೆ. ಈ ಸಂಬಂಧ ಸವಿವರ ಸುತ್ತೋಲೆ ಹೊರಡಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ಹಂತ -02 ರಲ್ಲಿ ಯಾವುದೇ ವಿದ್ಯಾರ್ಥಿ ವೃತ್ತಿ ಕೌಶಲ್ಯ ವಿಷಯವನ್ನು ಆಯ್ಕೆ ಮಾಡಿಕೊಂಡು ಸೆಕ್ಟಾರ್‌ನಲ್ಲಿ ಅರ್ಹತೆ ಪಡೆದು ಬೇರೆ ಸ್ಥಳಕ್ಕೆ ಪ್ರಥಮ ಪಿ.ಯು.ಸಿ ಗೆ ಪ್ರವೇಶ ಪಡೆದಲ್ಲಿ ಆ ಸ್ಥಳ/ಊರಲ್ಲಿ ಅದೇ ಸೆಕ್ಟಾರ್‌ನಲ್ಲಿ ವೃತ್ತಿ ಶಿಕ್ಷಣ ನಡೆಯುತ್ತಿದ್ದಲ್ಲಿ ಈ ವಿದ್ಯಾರ್ಥಿಗೆ ಪ್ರವೇಶಾವಕಾಶ ನೀಡುವುದು.

ವೃತ್ತಿ ಶಿಕ್ಷಣ ಅನುಷ್ಠಾನಿತ ಕಾಲೇಜುಗಳಲ್ಲಿ ಹಂತ -03 (ಪ್ರಥಮ ಪಿ.ಯು.ಸಿ) ಮತ್ತು ಹಂತ-04 (ದ್ವಿತೀಯ ಪಿಯುಸಿ )ಗೆ ಅನುಬಂಧ-01 ರಲ್ಲಿರುವಂತೆ ಅವಧಿಗಳನ್ನು ನಿಗಧಿಪಡಿಸಲಾಗಿದ್ದು, ಅದರಂತೆ ಕಾಲೇಜು ವೇಳಾ ಪಟ್ಟಿಯಲ್ಲಿ ಅಷ್ಟು ನಿಗದಿಪಡಿಸಲು ತಿಳಿಸಿದೆ.

ಹಂತ-02,03 ರಲ್ಲಿ ವೃತ್ತಿ ಶಿಕ್ಷಣ ಓದಿ ಅರ್ಹತೆ ಪಡೆದು ಮುಂದಿನ ಹಂತಗಳಿಗೆ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಅನುಷ್ಠಾನಿತ ಕಾಲೇಜುಗಳಲ್ಲಿ ಅನುಮತಿ ನೀಡುವುದು.

ಮುಂದಿನ ಆದೇಶವರೆಗೆ ಈ ಮೇಲ್ಕಂಡ ಅಂಶಗಳನ್ನು ಪ್ರತಿ ವರ್ಷ ಮುಂದುವರೆಸಲು ತಿಳಿಸಲಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಯನ್ನು,**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ, ಬೆಂಗಳೂರು-ಇವರ ಮಾಹಿತಿಗಾಗಿ
2. ಜಂಟಿ ನಿರ್ದೇಶಕರು, (ಪರೀಕ್ಷೆ) (ಮಾ&ಅ), (ಆಡಳಿತ), (ಶೈಕ್ಷಣಿಕ) ಪ.ಪೂ.ಶಿ.ಇ-ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ-ಮುಂದಿನ ಕ್ರಮಕ್ಕಾಗಿ.
4. ಸಂಬಂಧಿಸಿದ ಪ್ರಾಚಾರ್ಯರು, ಸರ್ಕಾರಿ ಸಂಯುಕ್ತ ಪ.ಪೂ.ಕಾಲೇಜುಗಳು -ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
5. ಇ-ಆಡಳಿತ ಶಾಖೆ-ಅಂತರ್ ಜಾಲದಲ್ಲಿ ಅಳವಡಿಸಲು
6. ಕಛೇರಿ ಪ್ರತಿ

Aca/anu/nsqf/2017-2018